ಓಡಿಸುತ್ತಿದ್ದಿರಲ್ಲಾ ಟೈರ್ ಟ್ಯೂಬ್ ಇಲ್ಲದೆ ಆ ಬಸ್ಸುಗಳು ನಿಂತಾಗ ಈ ಬಸ್ಸುಗಳನ್ನು ಉಪಯೋಗಿಸುವುದಕ್ಕೆ ಇಟ್ಟಿದ್ದು.

ಶ್ರೀ ಸಿದ್ಧರಾಮಯ್ಯ :- ಕೆ.ಎಸ್.ಆರ್.ಟಿ.ಸಿ. ಬಗ್ಗೆ ಬೇರೆ ದಿವಸ ಚರ್ಚೆ ಮಾಡೋಣ. ಈಗ ಇರತಕ್ಕಂಥಾದ್ದು ರಾಜ್ಯದ ಜನರಿಗೆ ತೊಂದರೆ ಆಗಿದೆಯೋ ಇಲ್ಲವೋ ಎನ್ನುವ ಬಗ್ಗೆ. ವಿದ್ಯಾರ್ಥಿಗಳಿಗೆ ಶಾಲೆಗಳಿಗೆ ಹೋಗಲು ತೊಂದರೆ ಆಗಿದೆಯೇ ಇಲ್ಲವೇ? ನಾವು ಸಾಧ್ಯವಾದ ಮಟ್ಟಿಗೆ ತೊಂದರೆ ಆಗದೇ ಇರುವಂತೆ ನೋಡಿಕೊಂಡಿದ್ದೇವೆ. ತೊಂದರೆ ಆಗಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಸ್ವಾಮಿ ತೊಂದರೆಯ ಪರಮಾವಧಿ ಆಗಿದೆ. ರಾಜ್ಯದಲ್ಲಿ ಗಂಭೀರವಾದ ಪರಿಸ್ಥಿತಿ ನಿರ್ಮಾಣ ಆಗಿದೆ. ಸಿದ್ಧರಾಮಯ್ಯನವರು ಹಾಗೂ ಜಾಲಪ್ಪನವರು ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳುತ್ತಿದ್ದಾರೆ. ನಾನು ಅವರ ಬಗ್ಗೆ ಬಹಳ ಗೌರವ ಇಟ್ಟುಕೊಂಡಿದ್ದೇನೆ. ಅವರ ಹೇಳಿಕೆಯನ್ನು ಖಂಡತುಂಡಾಗಿ ಧಿಕ್ಕರಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಆರ್.ಎಲ್.ಜಾಲಪ್ಪ :- ಮಾನ್ಯ ಅಧ್ಯಕ್ಷರೇ, ನಾವು ಸರ್ಕಾರ ನಡೆಸುತ್ತಿದ್ದೇವೆ. ಇದು ಪ್ರಜಾತಂತ್ರ ಸರ್ಕಾರ. ಅದರಲ್ಲಿ ಒಂದು ಸಿಸ್ಟಂ ಇದೆ. There is method in madness in also. ದಯವಿಟ್ಟು ಅರ್ಥ ಮಾಡಿಕೊಳ್ಳಿ, ಅವರು ನಮಗೆ ಒಂದು ನೋಟೀಸ್ ಕೊಟ್ಟು ನಮಗೆ ಈ ತರಹ ತೊಂದರೆ ಆಗಿದೆ ನಾವು ನಿಮ್ಮ ಹತ್ತಿರ ಚರ್ಚೆಗೆ ಬರುತ್ತೇವೆ ನಾವು ನೀವು ಕುಳಿತು ಮಾತನಾಡೋಣ ಎಂದು ಹೇಳಬಹುದಿತ್ತು. ಅದು ಹೇಳಲಿಲ್ಲ.

ಶ್ರೀ ಎಸ್.ಬಂಗಾರಪ್ಪ :- ಮಾನ್ಯ ಅಧ್ಯಕ್ಷರೇ, ಸಹಜವಾಗಿ ಪ್ರಜಾಪ್ರಭುತ್ವದಲ್ಲಿ ಸರ್ಕಾರ ತೆರಿಗೆಯನ್ನು ಹಾಕತಕ್ಕಂಥಾದ್ದು, ಕಡಿಮೆ ಮಾಡತಕ್ಕಂಥಾದ್ದು ಸ್ಟ್ರಕ್ಚರ್ ಆಫ್ ಟ್ಯಾಕ್ಸೇಷನ್ ಅದು ಸರ್ಕಾರಕ್ಕೆ ಇರತಕ್ಕಂಥ ಅಧಿಕಾರ. ಅದರ ಬಗ್ಗೆ ಪ್ರಶ್ನೆ ಮಾಡುವುದಕ್ಕೆ ಆಗುವುದಿಲ್ಲ. ಆದರೆ see the Motor Vehicles Taxation Act

ಎಷ್ಟು ಟ್ಯಾಕ್ಸ್ ನಾವು ಹಾಕಿದ್ದೇವೆ. ಈಗ ಸಿದ್ಧ ಉಡುಪುಗಳು. ಇದಕ್ಕೆ ಇಷ್ಟು ಟ್ಯಾಕ್ಸ್